**ಘನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.ರವರ ನ್ಯಾಯಾಲಯಃ ಮುಳಬಾಗಿಲು**

**ಸಿ.ಸಿ.ನಂಃ 6239/2024**

| | | |
|---|---|---|
| ಫಿರ್ಯಾದಿದಾರರು | : | ರಾಜ್ಯದ ಪರವಾಗಿ<br>ಮುಳಬಾಗಿಲು ನಗರ ಪೋಲಿಸರು |

-ವಿರುದ್ಧ-

| | | |
|---|---|---|
| ಆರೋಪಿತರು | : | 1. ಚಂದ್ರಶೇಖರ್ ಸಿ., 40 ವರ್ಷ,<br>ಬಿನ್ಃ ಚನ್ನಪ್ಪ,<br>ವಾಸಃ ಗಣೇಶಪಾಳ್ಯ,<br>ಮುಳಬಾಗಿಲು ನಗರ<br><br>2. ನಾಗರಾಜ., 30 ವರ್ಷ,<br>ಬಿನ್ಃ ಲೇಟ್ ವೆಂಕಟೇಶಪ್ಪ,<br>ವಾಸಃ ಗುಜ್ಜನಹಳ್ಳಿ ಗ್ರಾಮ,<br>ದುಗ್ಗಸಂದ್ರ ಹೋಬಳಿ,<br>ಮುಳಬಾಗಿಲು ತಾಲೂಕು. |

**ದೋಷಾರೋಪಣೆ**

ಮುಳಬಾಗಿಲಿನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳಾದ ಶ್ರೀ **ಜಿ.ಹರೀಶ್,** ಎಂ.ಬಿ.ಎ. ಎಲ್.ಎಲ್.ಬಿ., ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿಗಳಾದ ನಿಮ್ಮಗಳ ವಿರುದ್ಧ ಕೆಳಕಂಡ ದೋಷಾರೋಪಣೆ ಹೊರಿಸುತ್ತೇನೆ.

ದಿಃ18.01.2024 ರಂದು ಬೆಳಿಗ್ಗೆ 8.00 ಗಂಟೆಯ ಸಮಯದಲ್ಲಿ ಸಾಕ್ಷಿ-1 ರವರು ಮುಳಬಾಗಿಲು ನಗರಸಭೆ ಗುಣಿಗಂಟಿಪಾಳ್ಯ, ಸೋಮೇಶ್ವರಪಾಳ್ಯ, ಪಳ್ಳಿಗರಪಾಳ್ಯ, ಬಜಾರ್ ರಸ್ತೆ, ಮುತ್ಯಾಲಪೇಟೆ ಹಾಗೂ ಮತ್ತಿತರ ಕಡೆಗಳಲ್ಲಿ ಗುಪ್ತ ಮಾಹಿತಿ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಅವರಿಗೆ ಬಂದ ಮಾಹಿತಿಯಂತೆ, ಆರೋಪಿತರಾದ ನೀವುಗಳು ದಿಃ21.01.2024 ಮತ್ತು ದಿಃ22.01.2024 ರಂದು ಅಯೋಧ್ಯೆಯಲ್ಲಿ ನಡೆಯಲಿರುವ ಶ್ರೀರಾಮ ದೇವರ ವಿಗ್ರಹ ಪ್ರತಿಷ್ಠಾಪನೆ ಅಂಗವಾಗಿ ಮುಳಬಾಗಿಲಿನಲ್ಲಿ ಶೋಭಾಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡಿರುವ ಬಗ್ಗೆ ಮುಳಬಾಗಿಲು ಬಿ.ಎಂ.ಸಿ ಪೆಟ್ರೋಲ್ ಬಂಕ್ ಸಮೀಪ, ಕುರುಡುಮಲೆ ಆರ್ಚ್ ಬಳಿ ಮತ್ತು ಪಳ್ಳಿಗರಪಾಳ್ಯ ಸಮೀಪ ಕುರುಬರಪೇಟೆ ರಸ್ತೆಯಲ್ಲಿ ಹಾಗೂ ಕುರುಬರಪೇಟೆ ವೃತ್ತದಲ್ಲಿ ಸಂಬಂಧಪಟ್ಟ ಮುಳಬಾಗಿಲು ನಗರಸಭೆ ಅಧಿಕಾರಿಗಳಿಂದ ಯಾವುದೇ ಪರವಾನಿಗಿಯನ್ನು ಪಡೆಯದೇ, ಫ್ಲೆಕ್ಸ್ ಬ್ಯಾನರ್-ಗಳನ್ನು ಅನಧೀಕೃತವಾಗಿ ಕಟ್ಟಿದ ಪರಿಣಾಮವಾಗಿ, ನೀವುಗಳು

**ಕರ್ನಾಟಕ ಮುಕ್ತ ಸ್ಥಳ (ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ), ಕಾಯ್ದೆ, 1981 ಕಲಂ-3** ಮತ್ತು **ಸಾರ್ವಜನಿಕ ಆಸ್ತಿ ಹಾನಿ ತಡೆಗಟ್ಟುವಿಕೆ ಕಾಯ್ದೆ ಕಲಂ-3** ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮಗಳ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಪ್ರಶ್ನೆ-1: ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ ಆ-1
ಆ-2

ಪ್ರಶ್ನೆ.2: ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಆ-1
ಆ-2

ಮೇಲಿನ ಪ್ರಶ್ನೆಗಳನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಅವರುಗಳು ಕೊಟ್ಟ ಉತ್ತರಗಳನ್ನು ಸ್ವತಃ ನಾನೇ ಬರೆದುಕೊಂಡಿರುವುದಾಗಿ ದೃಢೀಕರಿಸುತ್ತೇನೆ.

ದಿನಾಂಕಃ 22.06.2026.

**(ಹರೀಶ್ ಜಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮುಳಬಾಗಿಲು.